**SPL.C. 5046/2025**

ಚಾ.ಸಾ **:1** ಪ್ರಾ.ಸಾ **:1**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಚಿನ್ನಪ್ಪ |
| ತಂದೆ ಹೆಸರು | : | ನರಸಿಂಹಲು |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು |
| ವಿಳಾಸ | : | ರಾಯಚೂರು |

ಸಾಕ್ಷಿಗೆ ದಿನಾಂಕ **28-01-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**

ದಿನಾಂಕ 10-01-2022 ರಿಂದ 31-06-2025 ರವರೆಗೆ ನಾನು ರಾಯಚೂರಿನ ಜೆಸ್ಕಾಂ ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 28-12-2022 ರಂದು ನಾನು, ಚಾ.ಸಾ4, 11 ಮತ್ತು ಪೊಲೀಸರೊಂದಿಗೆ ಒಳಬಳ್ಳಾರಿಯಲ್ಲಿರುವ ನೀರಿನ ಹೊಂಡಕ್ಕೆ ಹೋಗಿದ್ದೇವು. ಆಗ ಸಾಯಂಕಾಲ 04-00 ಗಂಟೆ ಆಗಿತ್ತು. ಅಲ್ಲಿ ಒಂದು ಹತ್ತು ಹೆಚ್. ಪಿ. ಪಂಪ್ ಸೆಟ್ ಇತ್ತು. ಆ ಪಂಪ್ ಸೆಟ್ಟಿಗೆ ನಿರಂತರ ಜ್ಯೋತಿಯ ವಿದ್ಯುತ್ ಸರಬರಾಜನ್ನು ಅನಧಿಕೃತವಾಗಿ ಪಡೆಯಲಾಗಿತ್ತು. ಆ ಸ್ಥಳದಲ್ಲಿ 1 ನೇ ಆರೋಪಿ ಶ್ರೀನಿವಾಸ ಹಾಜರಿದ್ದನು.

3. ಆ ರೀತಿ ಅನಧಿಕೃತವಾಗಿ ಪಡೆದ ವಿದ್ಯುತ್ ಸರಬರಾಜನ್ನು ಚಾ.ಸಾ6 ಈತನ ಮೂಲಕ ಕಡಿತಗೊಳಿಸಿದ್ದೇವೆ. ಅಲ್ಲಿದ್ದ ಸರ್ವಿಸ್ ವೈಯರ್ ಮತ್ತು ಪಂಪ್ ಸೆಟ್ಟಿಗೆ ಇದ್ದಂತಹ ಸ್ಟಾಟರ್ ಇವುಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದಿದ್ದಾರೆ. ಸಾಕ್ಷಿ ಆ ಎರಡು ವಸ್ತುಗಳನ್ನು ಗುರುತಿಸಿದ್ದು ಅವುಗಳನ್ನು ಮುದ್ದೆಮಾಲು 1 ಎಂದು 2 ಎಂದು ಗುರುತಿಸಲಾಯಿತು.

4. ಆ ಸ್ಥಳದಲ್ಲಿ ಪಂಚನಾಮೆ ಮಾಡಲಾಗಿದೆ. ನಾನು ಪಂಚನಾಮೆಯ ಮೇಲೆ ಸಹಿ ಮಾಡಿದ್ದೇನೆ. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನಿ.ಪಿ.1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

5. ನಾನು ಆ ಸ್ಥಳದಲ್ಲಿ ಪರಿಶೀಲನಾ ವರದಿಯನ್ನು, ವಿದ್ಯುತ್‌ಚ್ಛಕ್ತಿ ಹಾನಿಯ ಅಂದಾಜು ವೆಚ್ಚವನ್ನು ತಯಾರಿಸಿದ್ದೇನೆ. ಆನಂತರ ನಾನು ಪೊಲೀಸರಿಗೆ ದೂರನ್ನು

ಕೊಟ್ಟಿದ್ದೇನೆ. ಸಾಕ್ಷಿ ಗುರುತಿಸಿದ ಈ ದಾಖಲೆಗಳನ್ನು ನಿ.ಪಿ.2 ರಿಂದ 4 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿ.ಪಿ. 2(ಎ) ರಿಂದ 4(ಎ) ಎಂದು ಗುರುತಿಸಲಾಯಿತು.

6. ಮೇಲೆ ಹೇಳಿದ ಅನಧಿಕೃತ ವಿದ್ಯುತ್ ಸರಬರಾಜನ್ನು ಪಡೆದಿದ್ದಕ್ಕಾಗಿ ಜೆಸ್ಕಾಂಗೆ 13,500 ಯುನಿಟ್ ಹಾನಿಯಾಗಿದ್ದು, ಅದರ ಮೊತ್ತ 2, 80,000/- ರೂಪಾಯಿ ಆಗುತ್ತದೆ. ನಾನು 1 ನೇ ಅರೋಪಿಯನ್ನು ಗುರುತಿಸುತ್ತೇನೆ. (ಈ ದಿನ ಆತ ನ್ಯಾಯಾಲಯದ ಮುಂದೆ ಹಾಜರು ಇರುವುದಿಲ್ಲ. ಆತನ ಗುರುತಿಸುವ ಕುರಿತು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.)

<u>ಪಾಟೀ ಸವಾಲು**: 1** ಮತ್ತು **2** ನೇ ಆರೋಪಿ ಪರ ವಕೀಲರಿಂದ**:**</u>

7. ನಾನು ದೂರನ್ನು ಪೊಲೀಸ್ ನಿರೀಕ್ಷಕರಿಗೆ ಮಾತ್ರ ನೀಡಿದ್ದೇನೆ. ನಿ.ಪಿ.4 ರಲ್ಲಿ ಮೊದಲನೇ ಹೆಸರು ನನ್ನದಿದೆ. ನಾನು ದೂರುದಾರನಾಗಿದ್ದೇನೆ. ನಾನು 10 ಹೆಚ್. ಪಿ. ಪಂಪ್ ಸೆಟನ್ನು ಕಿಲೋ ವ್ಯಾಟ್ ದಲ್ಲಿ ಕನ್ವರ್ಟ್ ಮಾಡಿದ್ದೇನೆ. ಅದರ ಮೊತ್ತ 7.5 ಕಿಲೋ ವ್ಯಾಟ್ ಬಂದಿರುತ್ತದೆ. 1 ಕಿಲೋ ವ್ಯಾಟಿನ ದಂಡದ ಮೊತ್ತ 150 ಯುನಿಟ್ ಆಗುತ್ತದೆ. ಆ ಸೂತ್ರವನ್ನು ಅನ್ವಯಿಸಿ ನಾನು ಹಾನಿಯಾದ ಯುನಿಟ್ ಮತ್ತು ಮೊತ್ತವನ್ನು ಅಂದಾಜು ಮಾಡಿದ್ದೇನೆ. ನಾನು ಆ ಸೂತ್ರವನ್ನು ನಿ.ಪಿ.4 ರಲ್ಲಿ ಬರೆದಿಲ್ಲ. ಹಾನಿಯ ವೆಚ್ಚವನ್ನು ದೂರಿನಲ್ಲಿ ಕಾಣಿಸಿಲ್ಲ. ನಾನು ದೂರಿನಲ್ಲಿ 2,60,619/- ರೂಪಾಯಿ ಎಂದು ನಮೂದಿಸಿದ್ದೇನೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಅದು ಬಿ.ಬಿ.ಸಿ. ಮೊತ್ತ ಆಗಿದೆ ಎಂದು ಉತ್ತರಿಸಿದ್ದಾರೆ.

8. ಪಂಪ್ ಸೆಟ್ಟು ಇದ್ದಂತಹ ವ್ಯಾಪ್ತಿಯಲ್ಲಿ ಲೈನ್ ಮ್ಯಾನ್ ಇದ್ದನು ಅಂದರೆ ಸರಿ. ಆ ಲೈನ್ ಮ್ಯಾನ್ ಸ ವಿದ್ಯುತ್ ಕಳ್ಳತನಕ್ಕೆ ಬಾದ್ಯಸ್ತನಿರುತ್ತಾನೆ ಅಂದರೆ ಸರಿಯಲ್ಲ. ದಿನಾಲೂ ಲೈನ್ ಮ್ಯಾನ್ ಗಳು ಎಲ್ಲಾ ವೈಯರಗಳನ್ನು ಪರಿಶೀಲಿಸುತ್ತಾರೆ ಅಂದರೆ ಸರಿಯಲ್ಲ. ನಿ.ಪಿ.4 ರ ಅನುಕ್ರಮ ನಂಬರ್ 4 ರಲ್ಲಿ ವಶಪಡಿಸಿಕೊಂಡ ವಸ್ತುಗಳ ವಿವರ ಬರೆಯುವಾಗ "10" ಇದನ್ನು ತಿದ್ದುಪಡೆ ಮಾಡಲಾಗಿದೆ ಅಂದರೆ ಸರಿ.

9. ಆ ಸ್ಥಳದಲ್ಲಿ ವಿಡಿಯೋ ಮಾಡಲಾಗಿದೆ ಮತ್ತು ಫೋಟೋ ತೆಗೆಸಲಾಗಿದೆ. ನಾನು ಅವುಗಳನ್ನು ಪೊಲೀಸರಿಗೆ ನೀಡಿರುತ್ತೇನೆ. ವಿಡಿಯೋ ಮಾಡಿಲ್ಲ ಮತ್ತು ಫೋಟೋ ತೆಗೆಸಿಲ್ಲ ಅದರೆ ಸರಿಯಲ್ಲ.

10. ಪಂಚನಾಮೆಯನ್ನು ನಾನೇ ಬರೆದಿದ್ದೇನೆ. ಪಂಪ್‌ಸೆಟ್ ಇದ್ದಂತಹ ಜಮೀನಿನ

ಮಾಲೀಕರು ರಮೇಶ ಎಂಬಾತನು ಇದ್ದನು. ಆತನ ಹೆಸರನ್ನು ನಾನು ದೂರಿನಲ್ಲಿ ಮತ್ತು ಪಂಚನಾಮೆಯಲ್ಲಿ ಕಾಣಿಸಿದ್ದೇನೆ. ಆತ ಸ್ಥಳದಲ್ಲಿ ಹಾಜರು ಇರಲಿಲ್ಲ. ಆ ಜಮೀನಿನ ಸರ್ವೆ ನಂಬರನ್ನು ನಾನು ನಿ.ಪಿ.1 ರಿಂದ 4 ರಲ್ಲಿ ಕಾಣಿಸಿರುವುದಿಲ್ಲ. ಸ್ಥಳದಲ್ಲಿ ಹಾಜರು ಇದ್ದಂತಹ 1 ನೇ ಆರೋಪಿ ನನಗೆ ನಿ.ಪಿ.1 ರಲ್ಲಿ ಕಾಣಿಸಿದ ಚಕ್ಬಂದಿಗಳನ್ನು ಹೇಳಿದ್ದಾನೆ. ನಾನು ಆತನ ಸಹಿಯನ್ನು ನಿ.ಪಿ.1 ರಲ್ಲಿ ಪಡೆದಿರುತ್ತೇನೆ. ಸಹಿ ಇರುವ ಸ್ಥಳದ ಮುಂದೆ ಸಹಿ ಮಾಡಿದ ವ್ಯಕ್ತಿಯ ಹೆಸರನ್ನು ಪಡೆದಿಲ್ಲ.

11. ದೂರಿನಲ್ಲಿ ನಾನು ಪಂಪ್‌ಸೆಟ್ಟಿನ ಕಂಪನಿಯ ಹೆಸರು ಕಾಣಿಸಿಲ್ಲ. ಅದರ ಬಣ್ಣವನ್ನು ಕಾಣಿಸಿಲ್ಲ. ಮುದ್ದೆಮಾಲು1 ಮತ್ತು 2 ಇವು ಆರೋಪಿಗೆ ಸಂಬಂಧಿಸಿದವುಗಳು ಅಲ್ಲ ಅಂದರೆ ಸರಿಯಲ್ಲ. ಅವುಗಳನ್ನು ಸೃಷ್ಟಿಸಲಾಗಿದೆ ಅಂದರೆ ಸರಿಯಲ್ಲ.

12. ನಾನು ದೂರನ್ನು ಕೊಟ್ಟ ನಂತರ ಹೇಳಿಕೆ ನೀಡಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಅಂದರೆ ಸರಿಯಲ್ಲ. ಅಂಕೆ-ಸಂಖ್ಯೆ ತೋರಿಸಲು ಪ್ರಕರಣವನ್ನು ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು